## ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯ



## ಅಂಗವೈಕಲ್ಯ ಒಳಗೊಳ್ಳುವಿಕೆ ಮಧ್ಯಸ್ಥಿಕೆ- ರಾಷ್ಟ್ರೀಯ ಸಮ್ಮೇಳನ

ದೇಶದಲ್ಲಿನ ಬಹುತೇಕ ಅಂಗವಿಕಲರು ಬಡತನ ರೇಖೆಗಿಂತ ಕೆಳಗೆ ಬದುಕುತ್ತಿದ್ದು ವಿಶೇಷಚೇತನರ ಸಬಲೀಕರಣಕ್ಕೆ ಸರ್ಕಾರ ಮತ್ತು ಸಮಾಜ ಅಗತ್ಯ ನೆರವು ಒದಗಿಸಬೇಕೆಂದು 'ಸಮರ್ಥನಂ ಇಂಟರ್ ನ್ಯಾಷನಲ್' ಟ್ರಸ್ಟಿನ ಸಂಸ್ಥಾಪಕ ಅಧ್ಯಕ್ಷರಾದ ಡಾ. ಜಿ.ಕೆ. ಮಹಾಂತೇಶ್ ಮನವಿ ಮಾಡಿದ್ದಾರೆ.

ಡಾ. ಮನಮೋಹನ್ ಸಿಂಗ್ ಬೆಂಗಳೂರು ನಗರ ವಿಶ್ವವಿದ್ಯಾನಿಲಯದ ಸಮಾಜ ಕಾರ್ಯ ವಿಭಾಗ ಅಂಗವಿಕಲರ ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದಲ್ಲಿ ಆಯೋಜಿಸಿರುವ ರಾಷ್ಟ್ರೀಯ ಸಮ್ಮೇಳನದಲ್ಲಿ ಪ್ರಧಾನ ಭಾಷಣ ಮಾಡಿದ ಅವರು ವಿಶ್ವದ ಜನಸಂಖ್ಯೆಯ ಶೇ.15 ರಷ್ಟು ಮಂದಿ ವಿವಿಧ ಅಂಗವೈಕಲ್ಯದಿಂದ ಬಳಲುತ್ತಿದ್ದಾರೆಂದು ವಿವರಿಸಿದರು.

ಉನ್ನತ ಶಿಕ್ಷಣದ ಹಂತದಲ್ಲಿ ಅಂಗವಿಕಲರ ಸಂಖ್ಯೆ ಅತ್ಯಲ್ಪವಾಗಿದ್ದು ಉದ್ಯೋಗ ರಂಗದಲ್ಲೂ ಅನೇಕ ಕಾರಣಗಳಿಂದಾಗಿ ಅವಕಾಶಗಳಿಂದ ವಂಚಿತರಾಗಿದ್ದಾರೆಂದು ಅವರು ವಿಷಾದಿಸಿದರು. ಅಂಗವಿಕಲರು ಪಿಂಚಣಿಯನ್ನು ಅವಲಂಬಿಸದೆ ಸ್ವಾವಲಂಬಿ ಬದುಕು ಸಾಗಿಸುವ ವಾತಾವರಣ ನಿರ್ಮಾಣವಾಗಲಿ ಎಂದು ಅವರು ಆಶಿಸಿದರು.

ಸರ್ವರಿಗೂ ಸಮಬಾಳು ಸರ್ವರಿಗೂ ಸಮಪಾಲು ಎಂಬ ತತ್ವದಂತೆ ಎಲ್ಲ ರೀತಿಯ ತಾರತಮ್ಯಗಳನ್ನು ತೊಲಗಿಸಿ ಸಾಮಾಜಿಕ -ಆರ್ಥಿಕ ಪ್ರಗತಿಯಲ್ಲಿ ಅಂಗವಿಕಲರನ್ನೂ ಒಳಗೊಳ್ಳುವ ವಿಶಾಲ ಮನೋಭಾವ ಬೆಳೆಸಬೇಕಾದ ಅಗತ್ಯವನ್ನು ಅವರು ಇದೇ ವೇಳೆ ಪ್ರತಿಪಾದಿಸಿದರು.

ಅಂಗವಿಕಲರನ್ನೂ ತೆರಿಗೆ ಪಾವತಿಸುವ ಪ್ರಜೆಗಳಾಗಿ ಪರಿವರ್ತಿಸಬೇಕೆಂದು ಅಭಿಪ್ರಾಯಪಟ್ಟ ಅವರು ಸಮರ್ಥನಂ ಟ್ರಸ್ಟ್ ಸಿಎಸ್‌ಆರ್ ನಿಧಿಯ ಬೆಂಬಲದಿಂದ ಕರ್ನಾಟಕ ಸೇರಿದಂತೆ ಅನೇಕ ರಾಜ್ಯಗಳಲ್ಲಿ ಸಹಸ್ರಾರು ವಿಶೇಷ ಚೇತನರಿಗೆ ಅತ್ಯುತ್ತಮ ನೆರವು ಒದಗಿಸುತ್ತಿದೆ ಎಂದು ಅವರು ಹೆಮ್ಮೆಯಿಂದ ನುಡಿದರು.

ಸಮ್ಮೇಳನವನ್ನು ಉದ್ಘಾಟಿಸಿ ಮಾತನಾಡಿದ ಕರ್ನಾಟಕ ಸರ್ಕಾರದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳಾದ ಉಮಾ ಮಹದೇವನ್ ರವರು ಅಂಗವಿಕಲರ ಜೀವನಮಟ್ಟ ಸುಧಾರಣೆಗೆ ಅಗತ್ಯವಿರುವ ಸಕಲ ಉತ್ತೇಜನ ಒದಗಿಸುವುದಾಗಿ ಭರವಸೆಯಿತ್ತರು.

ಅಂಗವಿಕಲರ ಪುನರ್ವಸತಿ ಮತ್ತು ಸಂಶೋಧನಾ ಸಂಸ್ಥೆಯ ಪ್ರತಿನಿಧಿ ಡಾ.ಎನ್.ಎಸ್.ಸೆಂಥಿಲ್ ಕುಮಾರ್, ನಿಮ್ಹಾನ್ಸ್ ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ಐ.ಎ. ಷರೀಫ್, ತುಮಕೂರು ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿಗಳಾದ ಪ್ರೊ. ವೈ.ಎಸ್. ಸಿದ್ದೇಗೌಡ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಕುಲಪತಿಗಳಾದ ಪ್ರೊ. ರಮೇಶ್.ಬಿ. ಅಂಗವಿಕಲ ವಿದ್ಯಾರ್ಥಿಗಳಿಗೆ ಉಪಯುಕ್ತವಾಗಬಲ್ಲ ತಂತ್ರಜ್ಞಾನ ಕೌಶಲ್ಯ ಆಧಾರಿತ ಪಠ್ಯಕ್ರಮ ರೂಪಿಸುವ ಆಶ್ವಾಸನೆಯಿತ್ತರು. ಕುಲಸಚಿವರಾದ ನವೀನ್ ಜೋಸೆಫ್.ಎ., ಕುಲಸಚಿವ (ಮೌಲ್ಯಮಾಪನ) ಪ್ರೊ.ರಮೇಶ. ಬಿ.ಕುಡೇನಟ್ಟಿ, ಸಮಾಜ ಕಾರ್ಯ ವಿಭಾಗದ ಮುಖ್ಯಸ್ಥರಾದ ಪ್ರೊ.ರಿತಿಕಾ ಸಿನ್ಹಾ ಉಪಸ್ಥಿತರಿದ್ದರು.

ಸೆಂಟ್ರಲ್ ಕಾಲೇಜಿನ ಆವರಣದಲ್ಲಿರುವ ಜ್ಞಾನಜ್ಯೋತಿ ಸಭಾಂಗಣದಲ್ಲಿ ಆಯೋಜಿಸಲಾಗಿರುವ ಎರಡು ದಿನಗಳ ಸಮ್ಮೇಳನದಲ್ಲಿ ವಿವಿಧ ವಿಶ್ವವಿದ್ಯಾಲಯಗಳ 300ಕ್ಕೂ ಹೆಚ್ಚು ಅಂಗವಿಕಲ ವಿದ್ಯಾರ್ಥಿಗಳು ಹಾಗೂ ಅಪಾರ ಸಂಖ್ಯೆಯ ಉಪನ್ಯಾಸಕರು ಮತ್ತು ಸಮಾಜ ಸೇವಾ ಕಾರ್ಯಕರ್ತರು ಭಾಗವಹಿಸಿರುವರು. ಸಮ್ಮೇಳನದ ಭಾಗವಾಗಿ ವಸ್ತುಪ್ರದರ್ಶನ ಸಹ ಏರ್ಪಡಿಸಲಾಗಿದೆ.




ಡಾ. ಮನಮೋಹನ್ ಸಿಂಗ್
ಬೆಂಗಳೂರು ನಗರ ವಿಶ್ವವಿದ್ಯಾನಿಲಯ
BE BOUNDLESS
DR. MANMOHAN SINGH
BENGALURU CITY UNIVERSITY
Department of Studies and Research in Social Work
In Association With
The Association of People with Disability (APD), Bengaluru
Institute for Disability, Rehabilitation & Research (IDRR)
INCLUSIVE DISABILITY


Ramesh B
Vanishree M
ಹಸಿರ ಹಾದಿ
ಸಮಾಜಕಾರ್ಯ
ಶಿಕ್ಷಣದಲ್ಲಿ
ಕ್ಷೇತ್ರಕಾರ್ಯ


Bengaluru, Karnataka, India
Smt.Uma Mahadevan
Dr. Mahantesh G K
Prof. Y S Siddegowda

